# ಎಲ್ಲಿ ಹೋಯಿತು ಗೋಬಾನಿ

ಭಾರತೀಯ ಸಂಸ್ಕೃತಿಯಲ್ಲಿ ಗೋವುಗಳಿಗೆ ಮಹತ್ವದ ಸ್ಥಾನ ಇದೆ. ಭಾರತೀಯರು ಗೋವನ್ನು ಬರಿ ಒಂದು ಪ್ರಾಣಿಯಾಗಿ ಕಾಣದೆ ಗೋವಿನ ಮುಖದಲ್ಲಿ ಬ್ರಹ್ಮನನ್ನು, ಕಣ್ಣುಗಳಲ್ಲಿ ವಿಷ್ಣುವನ್ನು, ಕಂಠದಲ್ಲಿ ರುದ್ರನನ್ನು, ಕೊಂಬುಗಳಲ್ಲಿ ಸೂರ್ಯ ಚಂದ್ರರನ್ನು, ನಾಲ್ಕು ಕಾಲುಗಳಲ್ಲಿ ನಾಲ್ಕು ವೇದವನ್ನು, ಎಂಟು ಗೊರಸುಗಳಲ್ಲಿ ಅಷ್ಟದಿಕ್ಪಾಲಕರನ್ನು, ಬಾಲದಲ್ಲಿ ಸರ್ಪಸಂತತಿಯನ್ನು, ರೋಮದಲ್ಲಿ ಕೋಟಿ ಕೋಟಿ ದೇವತೆಗಳನ್ನು, ಕೆಚ್ಚಲಲ್ಲಿ ಅಮೃತವನ್ನು ಕಾಣುತ್ತಾರೆ.

ಈ ಕಾರಣದಿಂದಲೇ ಊರುಗಳಲ್ಲಿ ಗೋಬಾನಿಗಳನ್ನು ಇಡುವ ಪದ್ಧತಿಯಿತ್ತು. ಕಲ್ಲಿಂದ ಕೆತ್ತಿದ ಹತ್ತರಿಂದ ಐವತ್ತು ಕೊಡಗಳಷ್ಟು ನೀರು ಹಿಡಿಯುವ ಗೋಬಾನಿಗಳು ಊರುಗಳಲ್ಲಿ ಸಾಮಾನ್ಯವಾಗಿ ಇರುತ್ತಿದ್ದವು. ಇದರಲ್ಲಿ ಊರಿನವರು ನೀರನ್ನು ತುಂಬಿಸಿ ಇಡುತ್ತಿದ್ದರು. ದನಕರುಗಳು ಗೋಬಾನಿಯ ನೀರು ಕುಡಿದು ತಮ್ಮ ಬಾಯಾರಿಕೆಯನ್ನು ಇಂಗಿಸಿಕೊಳ್ಳುತ್ತಿದ್ದವು. ಇಂದು ಕೊಟ್ಟಿಗೆಗಳೇ ಇಲ್ಲದ ಊರುಗಳಲ್ಲಿ ಗೋಬಾನಿಯನ್ನು ಊಹಿಸುವುದು ಕಷ್ಟ. ಇಂದಿಗೂ ಕೆಲವು ಊರುಗಳಲ್ಲಿ ಗೋಬಾನಿ ನಿರ್ಮಿಸಿ ಗೋವುಗಳಿಗೆ ನೀರು ಕೊಡುವವರಿದ್ದಾರೆ. ಅಂಕೋಲಾ ನಗರವಾಸಿಯಾದ ವ್ಯಂಗ್ಯ ಚಿತ್ರಕಾರ ದೇವಿದಾಸ ಸುವರ್ಣ ಅವರು  ಕಳೆದ ಹಲವಾರು ವರ್ಷಗಳಿಂದ ಗೋಬಾನಿ ನಿರ್ಮಿಸಿ ದನಕರುಗಳಿಗೆ ನೀರುಣಿಸುತ್ತಿದ್ದಾರೆ. ಶಿರಸಿ ನಗರದ ಭಗತ ಸಿಂಗ್ ರಸ್ತೆಯಲ್ಲಿ ಈ ಗೋಬಾನಿ ನೋಡಿದಾಗ ಇಷ್ಟೆಲ್ಲ ಬರೆಯುವಂತೆ ಮಾಡಿತು.

**–ಬೀರಣ್ಣ ನಾಯಕ ಮೊಗಟಾ**





# ‘ಸೀ ಹಾರ್ಟ್’ ಕಂಡೀರಾ?

ವಾಯುವಿಹಾರ ಮಾಡುವಾಗ ಒಂದು ದೊಡ್ಡ ಮರದ ಕೆಳಗೆ ಹಾದು ಹೋದೆ. ಆ ಮರವು ಹೂ ಬಿಟ್ಟು ವಿಚಿತ್ರಕಾರದ ಕಾಯಿಗಳನ್ನು ಕೆಳಗೆ ಬೀಳಿಸುತ್ತಿತ್ತು. ಆ ಕಾಯಿ ಕಾಲಿಗೆ ತಾಕಿ ಅದರತ್ತ ಚಿತ್ತ ಹರಿಸಿದೆ. ಅದನ್ನು ನಾನು ಹಿಂದೆಂದೂ ನೋಡಿರಲಿಲ್ಲ. ಕುತೂಹಲಕ್ಕಾಗಿ ಗೂಗಲ್‌ನಲ್ಲಿ ಅದರ ಬಗ್ಗೆ ಹುಡುಕಾಡಿದಾಗ ಕುತೂಹಲಕಾರಿ ಮಾಹಿತಿ ತೆರೆದುಕೊಂಡಿತು.

ಇದು ಎಂಟಡಾ ಗೀಗಾಸ್ ಬೀಜದ ಪಾಡ್ (ಕೋಶ) ಆಗಿದೆ. ಸಾಮಾನ್ಯವಾಗಿ ಇದನ್ನು ‘ಸೀ ಹಾರ್ಟ್’, ‘ಮಂಕಿ ಲ್ಯಾಡರ್’, ‘ಆನೆ ಕಿವಿ ಕಾಯಿ’, ‘ಮಂಗನ ಕಿವಿ ಕಾಯಿ’ ಅಥವಾ ‘ದೆವ್ವದ ಕಿವಿ ಕಾಯಿ’ ಅಂತ ಕರೆಯುತ್ತಾರೆ. ಉಷ್ಣವಲಯದ ಕಾಡು ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುವ ಈ ಕಾಯಿಯ ಮರವು ಸುಮಾರು 50 ಸೆಂ.ಮೀ. ಉದ್ದ ಮತ್ತು 10 ಸೆಂ.ಮೀ. ಅಗಲ ಇರುತ್ತದೆ. ಕಡು ಕಂದು ಬಣ್ಣವನ್ನು ಹೊಂದಿದ ಇದರ ಬೀಜಗಳು ಸುರಕ್ಷಿತವಾಗಿ ಅಡಗಿಕೊಂಡಿರುತ್ತವೆ. ನಯವಾದ ತೊಗಟೆ  ಹೊಂದಿರುವ ಬೀಜಗಳು ತಿನ್ನಲು ಯೋಗ್ಯವಲ್ಲ. ಆಭರಣ ಮತ್ತು ಕರಕುಶಲ ವಸ್ತುಗಳ ತಯಾರಿಕೆಯಲ್ಲಿ ಇವುಗಳನ್ನು ಬಳಸುತ್ತಾರೆ.

**–ಮೈ. ಸತೀಶ ಕುಮಾರ, ಬಂಗಾರಪೇಟೆ**

